2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 105/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸಂತೋಷ್ | ಪಿಡಬ್ಲೂ - 8 |
| ತಂದೆಯ ಹೆಸರು | - | ಜಯಣ್ಣ | ಸಿಡಬ್ಲೂ - 12 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ವ್ಯಾಪಾರ | |
| ವಾಸ ಸ್ಥಳ | - | ಅಜ್ಜಂಪುರ | |

ದಿನಾಂಕಃ 15.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು, ಅವರು ನನ್ನ ದೂರದ ಸಂಬಂಧಿಗಳು. ಭಾಗ್ಯ, ಮೂರ್ತಪ್ಪ, ಗೌತಮ್ ಮತ್ತು ಹರ್ಷಿತಾ ಅಲಿಯಾಸ್ ಮಾನ್ಯ ಶ್ರೀ , ವಿನಯ್, ಸುಶೀಲಮ್ಮ ರವರು ಗೊತ್ತು, ಅವರು ಸಹ ನನ್ನ ದೂರದ ಸಂಬಂಧಿಗಳು.

2. ಚಾಸಾ.1 ನನ್ನ ಮಾವ. ಚಾಸಾ.9 ಗೊತ್ತು, ಅವರು ಚಾಸಾ.1 ರವರ ಹೆಂಡತಿ. ಚಾಸಾ.10 ಮತ್ತು ಮೃತ ಲತಾ ಚಾಸಾ.1 ರವರ ಮಕ್ಕಳು. ಪ್ರಾಸಾ.7 ನನ್ನ ಹಿರಿಯ ಮಾವ. ಚಾಸಾ.13 ರವರು ಗೊತ್ತು. ಚಾಸಾ.14 ನನ್ನ ಚಿಕ್ಕಮ್ಮನ ಮಗಳು. ಸಹ ಪಂಚನಾದ ಚಾಸಾ.21 ರವರು ಗೊತ್ತು. ಚಾಸಾ.1 ರವರಿಗೆ ಮೃತ ಲತಾ ಹಿರಿಯ ಮಗಳು.

3. 2018 ನೇ ಇಸವಿ ದೀಪಾವಳಿ ಹಬ್ಬದ ಸಮಯದಲ್ಲಿ ಲತಾಳ ಮದುವೆ 1 ನೇ ಆರೋಪಿಯೊಂದಿಗೆ ನಡೆದಿತ್ತು. ಅವರು

ಕಲ್ಲತ್ತಗಿರಿಯಲ್ಲಿ ಪ್ರೀತಿಸಿ ಮದುವೆಯಾಗಿದ್ದರು. ಅವರು ಮದುವೆ ಮಾಡಿಕೊಂಡ ವಿಚಾರ ಲತಾಳ ತಂದೆ ತಾಯಿ ಮತ್ತು ನಮಗೆ ತಿಳಿದಿರಲಿಲ್ಲ. ಅವರ ಮದುವೆಯಲ್ಲಿ 1 ನೇ ಆರೋಪಿಯ ತಂದೆ ತಾಯಿ, ಅಣ್ಣ, ಆತನ ಚಿಕ್ಕಪ್ಪ ಮತ್ತು ಚಿಕ್ಕಮ್ಮಂದಿರಾದ ಮೂರ್ತಪ್ಪ, ಭಾಗ್ಯ ಮತ್ತು ಅವರ ಮಕ್ಕಳಾದ ಗೌತಮ್ ಮತ್ತು ಹರ್ಷಿತಾ ಮತ್ತು ಸಂಬಂಧಿಕರಾದ ವಿನಯ್ ಮತ್ತು ಸುಶೀಲಮ್ಮರವರು ಭಾಗವಹಿಸಿದ್ದ ಬಗ್ಗೆ ತಿಳಿಯಿತು. ಲತಾ ಮತ್ತು 1 ನೇ ಆರೋಪಿಯ ಮದುವೆಯಾದ 1 ವಾರದ ಬಳಿಕ ಅವರ ಸ್ನೇಹಿತರು ಮತ್ತು ಊರಿನವರಿಂದ ಅವರ ಮದುವೆಯ ಬಗ್ಗೆ ನಮಗೆ ತಿಳಿಯಿತು.

4. ಆ ಸಮಯದಲ್ಲಿ ಲತಾ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ದ್ವಿತೀಯ ವರ್ಷದ ಬಿಕಾಂ ವ್ಯಾಸಂಗ ಮಾಡುತ್ತಿದ್ದಳು ಮತ್ತು ಹಾಸ್ಟೆಲ್ ನಲ್ಲಿ ಉಳಿದುಕೊಂಡಿದ್ದಳು. ಆರೋಪಿತರು ಬುಕ್ಕಾಂಬೂದಿ ಗ್ರಾಮದವರು. ಮದುವೆಯಾದ ಬಳಿಕ ಲತಾ ಬುಕ್ಕಾಂಬೂದಿಯಲ್ಲಿರುವ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು. ಸದರಿ ಮನೆಯಲ್ಲಿ ಆರೋಪಿತರು ಮತ್ತು ಮೃತ ಲತಾ ವಾಸವಾಗಿದ್ದರು.

5. ಮದುವೆಯಾದ ಸ್ವಲ್ಪ ದಿನಗಳ ಬಳಿಕ ಆರೋಪಿತರು ಲತಾಳಿಗೆ ಹಿಂಸೆ ಮಾಡುತ್ತಿದ್ದ ವಿಚಾರ ತಿಳಿಯಿತು. ಆರೋಪಿತರು ಲತಾಳಿಗೆ ಹಿಂಸೆ ನೀಡುತ್ತಿದ್ದರಿಂದ ಮದುವೆಯಾದ 2-3 ತಿಂಗಳಿಗೆ ಆಕೆ ವಿಷವನ್ನು ಕುಡಿದಿದ್ದ ಬಗ್ಗೆ ತಿಳಿಯಿತು.

6. ನಂತರ ಲತಾ ಮತ್ತು ಆರೋಪಿತರು ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿದ್ದಾಗಿ ಅಲ್ಲಿ ಪೊಲೀಸರು ಇಬ್ಬರಿಗೂ ಬೈದು ಬುದ್ಧಿ ಹೇಳಿ ಕಳುಹಿಸಿದ್ದಾಗಿ ತಿಳಿಯಿತು. ದಿನಾಂಕ 19.04.2019 ರಂದು ನಾನು ನಮ್ಮ ಊರಾದ ಗಡಿರಂಗಾಪುರದಲ್ಲಿದ್ದೆನು. ಮಾರನೇ ದಿನ ಅಂದರೆ ದಿನಾಂಕ 20.04.2019 ರಂದು ನನ್ನ ಮಾವನ ಮಗಳಾದ ಮಾನಸಾ ನನಗೆ ಫೋನ್ ಮಾಡಿ ಲತಾ ಬುಕ್ಕಾಂಬೂದಿಯಲ್ಲಿರುವ ಆಕೆಯ ಗಂಡನ ಮನೆಯಲ್ಲಿ ಮೃತಪಟ್ಟಿರುವುದಾಗಿ ತಿಳಿಸಿದಳು. ನಂತರ ನಾನು ಕೂಡಲೇ ಬುಕ್ಕಾಂಬೂದಿಗೆ ಹೋಗಿ ಲತಾಳ ಗಂಡನ ಮನೆಗೆ ಹೋದೆನು. ನಾನು ಅಲ್ಲಿಗೆ ಹೋದಾಗ ಅಜ್ಜಂಪುರ ಪೊಲೀಸರು, ತಹಶೀಲ್ದಾರ್ ರವರು ಅಲ್ಲಿಗೆ ಬಂದಿದ್ದರು ಮತ್ತು ಸುತ್ತಮುತ್ತಲಿನ ಜನರು ಸೇರಿದ್ದರು ಮತ್ತು ಫ್ರಾಸಾ.1, ಫ್ರಾಸಾ.6 ಮತ್ತು ಫ್ರಾಸಾ.7, ಚಾಸಾ.13, ಚಾಸಾ.14 ಮತ್ತು ಇನ್ನೂ ಕೆಲವು ಸಂಬಂಧಿಕರು ಇದ್ದರು.

7. ಲತಾಳ ಗಂಡನ ಮನೆ ಹೆಂಚಿನಮನೆಯಾಗಿದ್ದು, ಅದರಲ್ಲಿ ಒಂದು ರೂಮ್ ಇತ್ತು. ಸದರಿ ರೂಮಿನ ಛಾವಣಿಯಲ್ಲಿದ್ದ ಅಡಿಕೆ ಮರದ ಬೊಂಬಿಗೆ ವೇಲಿನ ಮೂಲಕ ಲತಾಳ ಶವವನ್ನು ನೇತು ಹಾಕಲಾಗಿತ್ತು. ನಾನು ನೋಡಿದಾಗ ಲತಾಳ ಕಾಲಿನ ಬೆರಳುಗಳು ನೆಲಕ್ಕೆ ತಾಗುತ್ತಿದ್ದವು ಮತ್ತು ಲತಾಳ ತಲೆಯ ಹಿಂಭಾಗಕ್ಕೆ ವೇಲಿನ ಗಂಟು ಇರುವುದು ಕಂಡು ಬಂತು. ಪೊಲೀಸರು ಟಾರ್ಚ್ ಹಾಕಿ ನೋಡಿದಾಗ ಲತಾಳ ಕುತ್ತಿಗೆಯಲ್ಲಿ ಬಲಕಿವಿಯ ಹಿಂಭಾಗದಿಂದ ಹಿಡಿದು

ಎಡಕಿವಿಯ ಹಿಂಭಾಗದವರೆಗೆ ವೈಯರ್ ಹಗ್ಗದ ಕಪ್ಪು ಬಣ್ಣದ ಗುರುತುಗಳು ಕಂಡು ಬಂದವು. ಲತಾಳ ಶವದ ಬಳಿಯಲ್ಲಿ 2 ವೈಯರ್ ಪೀಸುಗಳು ಬಿದ್ದಿದ್ದವು ಮತ್ತು ಅನಂತು ಮತ್ತು ಚೇತನ್ ರವರು ಪೊಲೀಸರ ಸಮಕ್ಷಮ ವೇಲನ್ನು ಕತ್ತರಿಸಿ ಶವವನ್ನು ಕೆಳಗೆ ಇಳಿಸಿದರು.

8. ಲತಾಳ ಕೈಯಲ್ಲಿ ರಕ್ತ ಹೆಪ್ಪುಗಟ್ಟಿದ್ದ ಗುರುತು, ಆಕೆಯ ಕಾಲುಗಳಲ್ಲಿ ಚಾಕುವಿನಿಂದ ಕುಯ್ದಂತಹ ಗಾಯವಾಗಿರುವುದು ಕಂಡು ಬಂತು. ಅಲ್ಲಿಗೆ ಬಂದಿದ್ದ ಅಜ್ಜಂಪುರದ ತಹಶೀಲ್ದಾರ್ ರವರು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿದ್ದೇನೆ. ಪೊಲೀಸರು ಮಧ್ಯಾಹ್ನ 1.30 ಅಥವಾ 2.00 ಗಂಟೆಯಿಂದ ಸಂಜೆ 4.30 ಗಂಟೆಯವರೆಗೂ ಶವಪಂಚನಾಮೆಯನ್ನು ಜರುಗಿಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದರು.

9. ಸದರಿ ಶವ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸು, ಶವ ಪಂಚನಾಮೆ ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ನೋಟೀಸನ್ನು ನಿಪಿ.33 ಎಂದು, ಶವ ಪಂಚನಾಮೆಯನ್ನು ನಿಪಿ.34 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.33(ಎ) ಮತ್ತು ನಿಪಿ.34(ಎ) ಎಂದು ಗುರುತಿಸಲಾಯಿತು. ಶವಪಂಚನಾಮೆಗೆ ನಾನು, ಚಾಸಾ.13 ರಾಜಪ್ಪ ಮತ್ತು ಚಾಸಾ.14 ಕಾವ್ಯ ರವರು ಸಹಿ ಮಾಡಿದ್ದೇವೆ.

10. ಸಾಕ್ಷಿಯು ಎರಡು ತುಂಡಾದ ವೈಯರ್ ಗಳನ್ನು ನೋಡಿ ಗುರುತಿಸಿ ಅವುಗಳು ಲತಾಳ ಶವದ ಬಳಿ ಬಿದ್ದಿದ್ದಾಗಿ ನುಡಿದಿರುತ್ತಾರೆ. ಸದರಿ ವೈಯರ್ ಗಳನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಒಂದು ತುಂಡಾದ ವೇಲನ್ನು ನೋಡಿ ಗುರುತಿಸಿ ಸದರಿ ವೇಲಿನಿಂದ ಲತಾಳನ್ನು ನೇತು ಹಾಕಲಾಗಿತ್ತು ಎಂದು ನುಡಿದಿರುತ್ತಾರೆ. ಸದರಿ ವೇಲನ್ನು ಈಗಾಗಲೇ ಮು.ಮಾ.3 ಎಂದು ಗುರುತಿಸಲಾಗಿರುತ್ತದೆ.

11. ಸಾಕ್ಷಿಯು ಈಗಾಗಲೇ ನಿಪಿ.2, ನಿಪಿ.9, ನಿಪಿ.10, ನಿಪಿ.3, ನಿಪಿ.4, ನಿಪಿ.5, ನಿಪಿ.11, ನಿಪಿ.6, ನಿಪಿ.7, ನಿಪಿ.8 ಫೋಟೋಗಳನ್ನು ನೋಡಿ ಗುರುತಿಸಿ ಅವುಗಳಲ್ಲಿ ಲತಾಳ ಶವ ನೇಣು ಬಿಗಿದ ಸ್ಥಿತಿಯಲ್ಲಿ ಕಂಡು ಬರುವುದಾಗಿ ಮತ್ತು ಅವಳ ಮೈಮೇಲೆ ಮೇಲೆ ಹೇಳಿದ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ. ಶವ ಪಂಚನಾಮೆಯ ಕಾಲಕ್ಕೆ ಲತಾಳಿಗೆ ಆರೋಪಿತರು ಮತ್ತು ಈ ಪ್ರಕರಣದಿಂದ ಕೈಬಿಡಲಾದ ಆರೋಪಿತರು ಸೇರಿ 1 ನೇ ಆರೋಪಿಯನ್ನು ಮದುವೆ ಮಾಡಿಕೊಂಡರೆ ಆಕೆಗೆ ಪೊಲೀಸ್ ಕೆಲಸ ಕೊಡಿಸುವುದಾಗಿ ಹೇಳಿ ಒಪ್ಪಿಸಿದ್ದಾಗಿ ತಿಳಿಯಿತು.

12. ದಿನಾಂಕ 17.07.2019 ರಂದು ಪೊಲೀಸರು ಅಜ್ಜಂಪುರ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿದ್ದರು. ನಾನು ಅಲ್ಲಿಗೆ ಹೋದಾಗ ಪ್ರಾಸಾ.1 ಮತ್ತು ಚಾಸಾ.21 ಸಂತೋಷ್

ರವರು ಇದ್ದರು. ಲತಾ ವಿದ್ಯಾಭ್ಯಾಸ ಮಾಡುತ್ತಿದ್ದ ಸಮಯದಲ್ಲಿ ಆಕೆಯ ತಂದೆಯಾದ ಫ್ರಾಸಾ.1 ಗಿರೀಶ್ ರವರು ಆಕೆಗೆ ಕೊಡಿಸಿದ್ದ ಒಂದು ಮೊಬೈಲ್ ನಲ್ಲಿ ಲತಾ ಆರೋಪಿತರು ಮತ್ತು ಈ ಪ್ರಕರಣದಿಂದ ಕೈ ಬಿಡಲಾದ ಆರೋಪಿತರೊಂದಿಗೆ ಮದುವೆಯ ಬಗ್ಗೆ ನಡೆಸಿದ್ದ ಸಂಭಾಷಣೆಯ ತುಣುಕುಗಳನ್ನು ಫ್ರಾಸಾ.1 ರವರು ಸೈಬರ್ ಸೆಂಟರ್ ನಲ್ಲಿ ಒಂದು ಡಿವಿಡಿ ಗೆ ಹಾಕಿಸಿ ಅದನ್ನು ಫ್ರಾಸಾ.1 ರವರು ನನ್ನ ಮತ್ತು ಚಾಸಾ.21 ರವರ ಸಮಕ್ಷಮ ಪೊಲೀಸರಿಗೆ ನೀಡಿದರು. ಸದರಿ ಡಿವಿಡಿಯನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡು ನಮ್ಮ ಸಮಕ್ಷಮ ಮಧ್ಯಾಹ್ನ 2.00 ಗಂಟೆಯಿಂದ 3.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದರು. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ.26 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಫೋಟೋವನ್ನು ತೆಗೆದುಕೊಂಡರು. ಸದರಿ ಫೋಟೋವನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.27 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋದಲ್ಲಿ ತನ್ನೊಂದಿಗೆ ಫ್ರಾಸಾ.1 ಮತ್ತು ಚಾಸಾ.21 ರವರು ಇರುವುದಾಗಿ ನುಡಿದಿರುತ್ತಾರೆ.

13. ಫ್ರಾಸಾ.1 ರವರು ಕೊಟ್ಟ ಡಿವಿಡಿಯನ್ನು ಪೊಲೀಸರು ನಮ್ಮ ಸಮಕ್ಷಮ ಪ್ಲೇ ಮಾಡಿದರು. ಅದರಲ್ಲಿ ಮೃತ ಲತಾಳೊಂದಿಗೆ 1 ರಿಂದ 4 ನೇ ಆರೋಪಿತರು, ಭಾಗ್ಯಮ್ಮ, ಮೂರ್ತಪ್ಪ ಲತಾಳ ಮದುವೆಯನ್ನು 1 ನೇ ಆರೋಪಿಯೊಂದಿಗೆ ನೆರವೇರಿಸುವ ಬಗ್ಗೆ ಮತ್ತು ಆಕೆಗೆ ಪೊಲೀಸ್ ಕೆಲಸ ಕೊಡಿಸುವ ಬಗ್ಗೆ ನಡೆದ ಸಂಭಾಷಣೆಗಳ ತುಣುಕುಗಳು ಇದ್ದವು ನಾವು ಅವುಗಳನ್ನು ಕೇಳಿಸಿಕೊಂಡೆವು. ಸದರಿ ಡಿವಿಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಡಿವಿಡಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.28 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲು: ಶ್ರೀ ಬಿ ಎಂ ಎಲ್ ಜಿ ವಕೀಲರಿಂದ ಆರೋಪಿತರ ಪರವಾಗಿ</u>

14. ನೀವು ಫ್ರಾಸಾ.1 ರವರ ಅಕ್ಕನ ಮಗ ಎಂದರೆ ಸರಿ. ನಾನು ವಾಸವಿರುವ ಸ್ಥಳದಿಂದ ಫ್ರಾಸಾ.1 ರವರು ವಾಸವಿರುವ ಸ್ಥಳಕ್ಕೆ ಸುಮಾರು 6-7 ಕಿಲೋ ಮೀಟರ್ ದೂರವಿದೆ. ನಾನು ಗಡಿರಂಗಾಪುರದ ಗ್ರಾಮ ಪಂಚಾಯ್ತಿಯ ಸದಸ್ಯನಲ್ಲ ಮತ್ತು ಯಾವುದೇ ಉನ್ನತ ಹುದ್ದೆಯನ್ನು ಅಲಂಕರಿಸಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ದಿನಾಂಕ 20.04.2019 ರಂದು ಮಧ್ಯಾಹ್ನ 1.30 ಗಂಟೆಯಿಂದ 4.00 ಗಂಟೆಯವರೆಗೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

15. ಲತಾ 1 ನೇ ಆರೋಪಿಯೊಂದಿಗೆ ತನ್ನ ಮದುವೆಯನ್ನು ಮಾಡಿಸಿಕೊಡುವಂತೆ ಪೊಲೀಸರಿಗೆ ಕೊಟ್ಟಿದ್ದ ಅರ್ಜಿಯ ಬಗ್ಗೆ ನನಗೆ ನಂತರ ತಿಳಿಯಿತು. ಕಲ್ಲತ್ತಗಿರಿಯಲ್ಲಿ ಲತಾ ಮತ್ತು 1 ನೇ ಆರೋಪಿ ಮದುವೆ ಮಾಡಿಕೊಂಡ 1 ವಾರದ ಬಳಿಕ ನಿಮಗೆ ಆ ವಿಚಾರ ತಿಳಿದುಬಂದ ಬಗ್ಗೆ ಪೊಲೀಸರಿಗೆ ದಿನಾಂಕ 20.04.2019 ರಂದು ನೀಡಿದ್ದೀರಿ ಎಂದು ಹೇಳಲಾದ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿದ್ದೇನೆ ಎನ್ನುತ್ತಾರೆ.

16. ಲತಾ ಶಿವಮೊಗ್ಗದಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಲ್ಲಿ ನಾನು ಅಲ್ಲಿಗೆ ಹೋಗಿ ಆಕೆಯನ್ನು ಮಾತನಾಡಿಸಿಕೊಂಡು ಬಂದಿಲ್ಲ. ದಿನಾಂಕ 20.04.2019 ರಂದು ನೀವು ಬುಕ್ಕಾಂಬೂದಿಗೆ ಹೋದಾಗ 1 ನೇ ಆರೋಪಿಯ ತಂದೆ ತಾಯಿ ಮತ್ತು ಅಣ್ಣಂದಿರಾದ 2 ರಿಂದ 4 ನೇ ಆರೋಪಿತರು ಬುಕ್ಕಾಂಬೂದಿಯಲ್ಲಿ ವಾಸವಿರದೇ ಶಿವನಿಯಲ್ಲಿ ವಾಸವಿದ್ದರು ಎಂದು ನಿಮಗೆ ತಿಳಿದುಬಂದಿತ್ತು ಎಂದರೆ ಸರಿ.

17. 1 ನೇ ಆರೋಪಿ ಬುಕ್ಕಾಂಬೂದಿಯಲ್ಲಿ ಮೃತ ಲತಾಳೊಂದಿಗೆ ವಾಸವಿದ್ದ ಸಮಯದಲ್ಲಿ ಹಾಲಿನ ವಾಹನದ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದನು ಎಂದರೆ ಸಾಕ್ಷಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ಬಗ್ಗೆ ಗೊತ್ತಿತ್ತು ಆದರೆ ಯಾವ ವಾಹನದ ಚಾಲಕ ಎಂದು ಗೊತ್ತಿಲ್ಲ ಎನ್ನುತ್ತಾರೆ.

18. ನಿಪಿ.34 ಶವ ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನಿಮಗೆ ತಿಳಿದಿವೆಯೇ ಎಂದರೆ ಸಾಕ್ಷಿ ನಾವು ಹೇಳಿದ ಮಾಹಿತಿಯನ್ನು ಬರೆದುಕೊಂಡರು ಎನ್ನುತ್ತಾರೆ. ಲತಾಳ ಶವದ ಬಳಿ ವೈಯರ್ ಹಗ್ಗದ ತುಂಡು ಬಿದ್ದಿದ್ದಾಗಿ ಹೇಳಿದ್ದೀರಿ ಅದರ ಅಳತೆ ಎಷ್ಟಿತ್ತು ಎಂದರೆ ಸಾಕ್ಷಿ ಅರ್ಧ ಮತ್ತು ಮುಕ್ಕಾಲು ಮಾರಿನಷ್ಟು ಉದ್ದವಿದ್ದವು ಎನ್ನುತ್ತಾರೆ. ಸದರಿ ವಿವರನ್ನು ಮಹಜರ್ ನಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಬರೆದುಕೊಂಡಿದ್ದಾರೆ ಎನ್ನುತ್ತಾರೆ. ಸದರಿ ವೈಯರ್ ನ ತುಂಡುಗಳು ಎಷ್ಟಿತ್ತು ಎಂದು ನಿಪಿ.34 ರಲ್ಲಿ ಬರೆಯಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

19. ಲತಾಳ ಮೈಮೇಲೆ ಗಾಯಗಳನ್ನು ನೋಡಿದ್ದಾಗಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೀರಿ ಸದರಿ ಗಾಯದ ವಿವರಗಳನ್ನು ಶವಪಂಚನಾಮೆಯಲ್ಲಿ ಬರೆಯಲಾಗಿದೆಯೇ ಎಂದರೆ ಸಾಕ್ಷಿ ಬರೆದುಕೊಂಡಿದ್ದಾರೆ ಎನ್ನುತ್ತಾರೆ. ವೇಲಿನ ಗುರುತನ್ನು ಹೊರತುಪಡಿಸಿ ನೀವು ಹೇಳಿದಂತೆ ಯಾವುದೇ ಗಾಯದ ಗುರುತುಗಳು ಲತಾಳ ಶವದ ಮೇಲೆ ಕಂಡು ಬಂದಿಲ್ಲ ಎಂದರೆ ಸರಿಯಲ್ಲ. ನೀವು ನೋಡಿದಾಗ ಲತಾಳ ಎರಡು ಕೈಗಳನ್ನು ಮುಷ್ಠಿ ಮಾಡಲಾಗಿತ್ತು, ನಾಲಿಗೆ ಹೊರಬಂದಿತ್ತು ಮತ್ತು ಕಣ್ಣುಗಳು ತೆರೆದಿದ್ದವು ಎಂದರೆ ಸರಿ.

20. ಶವಪಂಚನಾಮೆಯನ್ನು ಪೊಲೀಸರು ಬರೆದುಕೊಂಡರು. ಲತಾಳು ಬಳಸುತ್ತಿದ್ದಳು ಎಂದು ಹೇಳಲಾದ ಮೊಬೈಲ್ ಸಂಖ್ಯೆಯನ್ನು ಹೇಳಲಾಗುತ್ತದೆಯೇ

ಎಂದರೆ ಸಾಕ್ಷಿ 9606765076 ಎನ್ನುತ್ತಾರೆ. ಸದರಿ ಸಿಮ್ ಸಂಖ್ಯೆ ಯಾರ ಹೆಸರಿನಲ್ಲಿತ್ತು ಎಂದು ನೀವು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಅದನ್ನು ಲತಾಳಿಗೆ ಆಕೆಯ ತಂದೆ ಕೊಡಿಸಿದ್ದರು ಎನ್ನುತ್ತಾರೆ.

21. ನಿಪಿ.28 ರಲ್ಲಿ ಲತಾ ಮತ್ತು ಆರೋಪಿತರು ಮತ್ತು ಪ್ರಕರಣದಿಂದ ಕೈಬಿಡಲಾದ ಆರೋಪಿತರ ನಡುವೆ ಸಂಭಾಷಣೆ ಇದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.28 ರಲ್ಲಿ ಇರುವ ಸಂಭಾಷಣೆಗಳು ಲತಾ ಮತ್ತು ಆರೋಪಿತರಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ಗೀಜೆಕಟ್ಟೆಯಿಂದ ಗಡಿರಂಗಾಪುರ ಗ್ರಾಮಕ್ಕೆ ಸುಮಾರು 3 ಕಿಲೋ ಮೀಟರ್ ದೂರವಿದೆ. ಗೀಜೆಕಟ್ಟೆಯಿಂದ ಅಜ್ಜಂಪುರ ಪೊಲೀಸ್ ಠಾಣೆಗೆ 18-20 ಕಿಲೋ ಮೀಟರ್ ದೂರವಿರಬಹುದು. ಗಡಿರಂಗಾಪುರದಿಂದ ಅಜ್ಜಂಪುರ ಪೊಲೀಸ್ ಠಾಣೆಗೆ 20-22 ಕಿಲೋ ಮೀಟರ್ ದೂರವಿದೆ.

22. ನಿಪಿ.26 ರಲ್ಲಿರುವ ಬರವಣಿಗೆಯನ್ನು ಮಹೇಂದ್ರಪ್ಪ ಎನ್ನುವ ಪೊಲೀಸರು ಮಾಡಿಕೊಂಡರು. ಆ ಸಮಯದಲ್ಲಿ ನಾನು ಮತ್ತು ಚಾಸಾ.21 ರವರು ಏನನ್ನೂ ಹೇಳಿ ಬರೆಸಿಲ್ಲ ಆದರೆ ಫ್ರಾಸಾ.1 ರವರು ಕೊಟ್ಟ ಡಿವಿಡಿಯನ್ನು ಪೊಲೀಸರು ತೆಗೆದುಕೊಂಡರು. ನಿಪಿ.26 ಪಂಚನಾಮೆಯನ್ನು ಬರೆದ ಜಾಗದ ಚೆಕ್ಕು ಬಂದಿಯನ್ನು ನನಗೆ ಹೇಳಲಾಗುವುದಿಲ್ಲ. ದಿನಾಂಕ 17.07.2019 ರಂದು ನಿಪಿ.26 ರಂತೆ ನಿಮ್ಮ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿ

ನಿಪಿ.28 ನ್ನು ಅಮಾನತುಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು, ಚಾಸಾ.21 ಮತ್ತು ಫ್ರಾಸಾ.1 ರವರು ಸಹಿ ಮಾಡಿದ್ದೇವೆ. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

23. ನೀವು ಫ್ರಾಸಾ.1 ರವರ ಹತ್ತಿರದ ಸಂಬಂಧಿಯಾಗಿರುವ ಕಾರಣ ಅವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಮುದ್ದೆ ಮಾಲು.2 ಮತ್ತು 3 ನ್ನು ಪೊಲೀಸರು ನೀವು ಹೇಳಿದಂತೆ ನಿಮ್ಮ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.